**<u>ಪ್ರಧಾನ ಸಿವಿಲ್ ಮತ್ತು  ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ</u>**

**ಸಿಸಿ  ನಂ. 554/2023**

| | | | |
|---|---|---|---|
| **ಹೆಸರು** | **:** | **ಭೀಮರೆಡ್ಡಿ** | ಚಾ.ಸಾ. 2 |
| **ತಂದೆಯ  ಹೆಸರು** | **:** | **ತಿಪ್ಪಾರೆಡ್ಡಿ** | ಪ್ರಾ.ಸಾ. 1 |
| **ವಯಸ್ಸು** | **:** | **52 ವರ್ಷ** | ದಿನಾಂಕಃ 20-01-2025 |
| **ಉದ್ಯೋಗ** | **:** | **ಒಕ್ಕಲುತನ** | |
| **ವಾಸಸ್ಥಳ** | **:** | **ಕೊಳ್ಳೂರು** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ</u>**

ಚಾಸಾ-1 ಮತ್ತು 3 ರವರು ನನಗೆ ಗೊತ್ತು. ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನಾನು ಈ ಮೊದಲು ನೋಡಿಲ್ಲ.

ಈಗ ನೋಡುತ್ತಿರುವ ದಾಖಲೆಯಲ್ಲಿ ನನ್ನ ಸಹಿ ಇದೆ. ಸದರಿ ದಾಖಲೆಯನ್ನು ನಿಪಿ-1 ಎಂದು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ಈಗ ನೋಡುತ್ತಿರುವ ಭಾವಚಿತ್ರದಲ್ಲಿ ನಾನು ಇದ್ದೇನೆ. ಸದರಿ ಭಾವಚಿತ್ರವನ್ನು ನಿಪಿ-2 ಎಂದು ಗುರುತಿಸಲಾಯಿತು. ಸದರಿ ಭಾವಚಿತ್ರದಲ್ಲಿ ಚಾಸಾ 1 ಮತು 3 ರವರು ಸಹ ಇದ್ದಾರೆ.

ಈಗ 2 ವರ್ಷಗಳ ಹಿಂದೆ ಮಧ್ಯಾಹ್ನ 2 ರಿಂದ 3 ಗಂಟೆ ಸುಮಾರಿಗೆ ಪೋಲಿಸರು ಕೊಳ್ಳೂರು ಗ್ರಾಮದ ಪರಮೇಶ್ವರ ಗುಡಿಯಲ್ಲಿ ಕಳ್ಳತನವಾದ ಬಗ್ಗೆ ಪೋಲಿಸರು ಪಂಚನಾಮೆ ಮಾಡಲು ಬಂದಾಗ ನಿಪಿ 1 ರಲ್ಲಿ ಸಹಿ ಮಾಡಿದ್ದೇನೆ. ಅದೇ ಸಮಯಕ್ಕೆ ನಿಪಿ 2 ರ ಭಾವಚಿತ್ರ ಪಡೆದಿದ್ದಾರೆ. ಆ ಸಮಯಕ್ಕೆ ನನ್ನ ಜೊತೆ ಪೋಲಿಸರು, ಚಾಸಾ 1 ಮತು 3 ರವರು ಇದ್ದರು. ಈಗ ನೋಡುತ್ತಿರುವ ಇನ್ನೊಂದು  ದಾಖಲೆಯಲ್ಲಿ ನನ್ನ ಸಹಿ ಇದೆ. ಸದರಿ ದಾಖಲೆಯನ್ನು ನಿಪಿ-3 ಎಂದು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು.

ಈಗ 2 ವರ್ಷಗಳ ಹಿಂದೆ ಮಧ್ಯಾಹ್ನ 2-30 ರಿಂದ 3 ಗಂಟೆ ಸುಮಾರಿಗೆ ಪೋಲಿಸರು ಕೊಳ್ಳೂರಿನ ಜಹಿರಾಬಾದ ಮನಾಖೆಳ್ಳಿ ರಸ್ತೆಯ ಹತ್ತಿರ ಪೋಸರು ಪಂಚನಾಮೆ ಮಾಡಲು ಬಂದಾಗ ನಿಪಿ 3 ರಲ್ಲಿ ನನ್ನ ಸಹಿ ಪಡೆದಿದ್ದಾರೆ.  ಪೋಲಿಸರು ನನ್ನ ಸಮಕ್ಷಮ ಒಂದು ರಾಡನ್ನು ಜಪ್ತಿ ಮಾಡಿರುತ್ತಾರೆ. ಸದರಿ ರಾಡು ಈಗ ನೋಡುತ್ತಿದು ಅದನ್ನು ಮು.ಮಾ 1 ಎಂದು ಗುರುತಿಸಲಾಯಿತು. ಮು.ಮಾ. 1 ಬಿಟ್ಟು ಬೇರೆ ಯಾವುದೇ ವಸ್ತು ಇರಲಿಲ್ಲ.

(ಈ ಹಂತದಲ್ಲಿ ತನಿಖಾಧಿಕಾರಿಯವರ ಮುಂದೆ ಸಲ್ಲಿಸಿರುವ ಜಪ್ತಿ ಪಂಚನಾಮೆಗೆ ಈ ಸಾಕ್ಷಿ ಭಾಗಶಃ ಪ್ರತಿಕೂಲ ಸಾಕ್ಷ್ಯ ನುಡಿಯುತ್ತಿದ್ದು, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೊಡುವಂತೆ ಸ.ಸ.ಅ.ರವರು ಅನುಮತಿ ಕೋರುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)

**<u>ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರಿಂದಃ</u>**

ಜಪ್ತಿ ಪಂಚನಾಮೆ ಮಾಡುವ ಸಮಯಕ್ಕೆ ಪೋಲಿಸರು ಒಂದು ಮುರಿದ ಕೀಲಿ ಜಪ್ತಿ ಮಾಡಿಕೊಂಡಿರುತ್ತಾರೆ ಎಂದರೆ ಸಾಕ್ಷಿ ನಾನು ನೋಡಿಲ್ಲ. ಆ ಸಮಯಕ್ಕೆ ನ್ಯಾಯಾಲಯದ ಮುಂದೆ ಇರುವ ಆರೋಪಿ ಸಹ ಸ್ಥಳದಲ್ಲಿ ಇದ್ದ ಎಂದರೆ ಸಾಕ್ಷಿ ನಾನು ನೋಡಿಲ್ಲ ಎಂದು ನುಡಿಯುತ್ತಾರೆ. ಈ ರೀತಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ SAS ವಕೀಲರಿಂದಃ</u>**

ಪಂಚನಾಮೆ ಸಂಗತಿಗಳನ್ನು ಪೋಲಿಸರು ನನಗೆ ಓದಿ ಹೇಳಿಲ್ಲ. ಮು.ಮಾ. 1 ತರಹದ ರಾಡು ಎಲ್ಲಾ ಕಬ್ಬಿಣದ ಅಂಗಡಿಗಳಲ್ಲಿ ಸಿಗುತ್ತದೆ ಎಂದರೆ ಸರಿ. ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿ.

**ಮರುವಿಚಾರಣೆಃ ಇಲ್ಲಾ.**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಪ್ರ.ದ.ನ್ಯಾ.ದಂ. ಚಿಂಚೋಳಿ**